

ರವಿಕುಮಾರ್ ನೀಹ

# ಇದ್ದಿಲಾಗುವ ಆಲಿ

## ಎನ್ಕೆ ಕವಿತೆಯ ಒಂದು ಪ್ರಾಯೋಗಿಕ ನೋಟ

ಎನ್.ಕೆ. ಹನುಮಂತಯ್ಯ ವಿಭಿನ್ನ ದಲಿತ ಜಗತ್ತನ್ನು ತಮ್ಮ ಬರಹದ ಮೂಲಕ ಪರಿಚಯಿಸಿದವರು. ದಲಿತಲೋಕದ ಕಾಣ್ಕೆಗಳಲ್ಲಿ ಆವರೆಗಿನ ಬದುಕಿನ ಮಗ್ಗುಲನ್ನು ಬದಲಿಸುವ ಯತ್ನವನ್ನು ಎನ್‌ಕೆ ಅವರ ಕವಿತೆಗಳಲ್ಲಿ ಗುರುತಿಸಬಹುದು. ಎನ್ಕೆ ಅವರ ‘ಮಾಂಸದಂಗಡಿಯ ನವಿಲು’ ಸಂಕಲನದ ‘ಇದ್ದಿಲಾಗುವ ಆಲಿ’ ಕವಿತೆಯನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ವಿಮರ್ಶೆ ಎಲ್ಲಿ ಅರ್ಥದ ಪರಿಧಿಯಲ್ಲಿ ನಿಂತುಬಿಡುವುದೋ? ಪದಪದಗಳನ್ನು ಸೇರಿಸಿ ಸಮಾನಾರ್ಥ, ನಾನಾರ್ಥ, ಪರ್ಯಾಯ ಅರ್ಥಗಳ ಮೂಲಕ ಸಾರಾಂಶ ರೂಪಿಯಾಗಿಬಿಡುವುದೋ? ಎಂಬ ಆತಂಕ ಇದ್ದೇ ಇದೆ. ಅದಲ್ಲದೇ ಒಟ್ಟು ಬಂಧವು ಎಲ್ಲಿ ಸಡಿಲಗೊಳ್ಳುವುದೋ, ಸರಳೀಕರಣವಾಗುವುದೋ ಎಂಬ ಎಚ್ಚರವೂ ಇದೆ.

‘ಇದ್ದಿಲಾಗುವ ಆಲಿ’ ಕವಿತೆಯೇ ಎರಡು ವಿರುದ್ಧಮುಖಿಗಳನ್ನು ಏಕವಾಗಿಸುವ ರೂಪಕ. ವಿರುದ್ಧಮುಖಿ ಚಲನೆಯನ್ನು ಬಯಸುವ ಹಾಗೆಯೇ, ಅದು ಕ್ರಿಯೆಯಾಗುವಲ್ಲಿ ಸಾಮಾಜಿಕ ಸಂಕಟಗಳನ್ನು ಜೋಡಿಸಿ ವಿಷಾದವಾಗಿಸುವ ಕಡೆ ಕವಿತೆ ಆರಂಭವಾಗುತ್ತದೆ. ಈ ಪದ್ಯದಲ್ಲಿ ಮೊದಲಿಗೆ ಇದ್ದಿಲು ಮತ್ತು ಆಲಿ ಎನ್ನುವ ಎರಡು ಪದಗಳು ಕವಿತೆಯ ಒಟ್ಟು ಆಯಾಮವನ್ನೇ ಬದಲಿಸಿಬಿಡುತ್ತವೆ. ಇದ್ದಿಲು ಜಡವೂ, ಚೈತನ್ಯವನ್ನು ಕಳೆದುಕೊಂಡ ಅಂತಿಮರೂಪವಾಗಿದೆ. ಬೆಂಕಿ ಕ್ರಿಯೆಯ ಆತ್ಯಂತಿಕ ರೂಪ. ಆಲಿ, ನೀರಿನ ರೂಪ; ನೀರಿನ ಘನೀಕರಿಸಿರುವ ರೂಪ. ಶೈತ್ಯವೂ, ನೀರಿನ ಕ್ರೋಡೀಕರಣವೂ ಒಟ್ಟಾಗಿ ಸೇರಿವೆ. ಆರಂಭವೂ ಕೊನೆಯ ರೂಪವೂ ‘ಆಲಿ’ಯನ್ನು ಪ್ರತಿನಿಧಿಸುತ್ತಿದೆ.

‘ಆಲಿ’ಗೆ ಚಲನೆಯ ಗುಣವಿದೆ. ಆದು ಅನೇಕ ರೂಪಾಂತರಗಳನ್ನು ಪಡೆಯಬಹುದು. ಅದಕ್ಕೆ ಸ್ವಲ್ಪ ಬಿಸಿ ತಾಗಿದರೆ ನೀರಾಗಿ ಜೀವದ್ರವ್ಯವೂ ಆಗಬಹುದು. ಹಾಗಾಗಿ ಅದು ಗರ್ಭದಲ್ಲಿ ಇನ್ನೂ ಅನೇಕ ಜೀವಂತಿಕೆಯ ಧಾತುಗಳನ್ನು ಇಟ್ಟುಕೊಂಡಿದೆ. ಆದರೆ ಇದ್ದಿಲಿಗೆ ಚಲನಗುಣವಿಲ್ಲ. ಚೈತನ್ಯವನ್ನು ಕಳೆದುಕೊಂಡು ಕೊನೆ ತಲುಪಿಬಿಟ್ಟಿದೆ. ಜೀವನದ ಕೊನೆಯ ಘಟ್ಟವನ್ನು ಅದು ಸೂಚಿಸುತ್ತಿದೆ. ಜೀವ-